ಶ್ರೀ ಎಸ್ ನಿಜಲಿಂಗಪ್ಪ.—ಸರ್ವಿಸ್ಸು ಎಲ್ಲಿ ಕಡಿಮೆ ಬೇಕು ಜಾಸ್ತಿ ಬೇಕು ಎನ್ನುವುದಕ್ಕೆ ಅಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೊಡಿಕೊಂಡು ನೇಮಕ ಮಾಡಬೇಕು ಎನ್ನುವ ಉದ್ದೇಶವಿದೆ. ಎಲ್ಲಿ ಲೈನುಗಳನ್ನು ಹಾಕಬೇಕೆಂದು ಇದೆಯೋ ಅಲ್ಲಿಗೆ ಸಾಕಷ್ಟು ಸರ್ವಿಸ್ಸು ಸ್ಟಾಫ್‌ನ್ನು ನೇಮಕ ಮಾಡುತ್ತಾರೆ.

ಶ್ರೀ ಆರ್. ಎಸ್. ಪಾಟೀಲ್.—ಬೆಳಗಾಂನಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದ ಕಂಪೆನಿಯ ವರಿಗೂ ಮತ್ತು ಅಲ್ಲಿನ ಜನಕ್ಕೂ ಒಂದು ತರಹದ ತಂಟೆ ತಕರಾರುಗಳು ಬಂದು ಅದನ್ನು ಪರಿಹರಿಸ ಬೇಕೆಂದು ಇಲ್ಲಿಗೆ ಅಲ್ಲಿಂದ ಒಂದು ವರಿಷ್ಠ ಮಂಡಲದವರು ಬಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕಂಡು ಅದರ ಬಗ್ಗೆ ಹೇಳಿದ ತಕರಾರುಗಳನ್ನು ಗಮನಿಸಿ ಸರಕಾರ ಮುಂದಿನ ಏಪ್ರಿಲ್ ಒಳಗೇನೇ ಖಂಡಿತವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೇವೆ ಎಂದು ಹೇಳಿದಂತೆ ಅದನ್ನು ಪೂರೈಸಿ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ತಾರೀಖನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅಲ್ಲಿಯ ಜನಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿಕೊಡುವ ಪ್ರಯತ್ನ ಮಾಡುತ್ತೇವೆ ಎಂದು ಇಷ್ಟು ಮಾತ್ರ ಇಲ್ಲಿ ತಿಳಿಸುತ್ತೇನೆ.

ಶ್ರೀ ಎನ್. ನಂಜೇಗೌಡ.—ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ಇರಾಖೆಯವರ ಕೆಲಸದ ಹಂಚಿಕೆ ಸರಿಯಾಗಿರುವಂತೆ ಕಾಣುತ್ತಿಲ್ಲ. ಕೃಷ್ಣರಾಜಪೇಟೆಯಲ್ಲಿರುವ ಇರಾಖೆಗೆ ಸಂಬಂಧಪಟ್ಟ ಅಸಿಸ್ಟೆಂಟು ಇಂಜನೀಯರು ಹೊಳೆ ನರಸೀಪುರದಲ್ಲಿ ಎಕ್ಸಿಕ್ಯೂಟೀವ್ ಇಂಜನೀಯರು ಹಾಸನದಲ್ಲಿ ಇತ್ತಾರೆ. ಈ ಡಿವಿಜನ್ನುಗಳನ್ನು ಸರಿಯಾಗಿ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲೆಕ್ಟ್ರಿಕ್ ಡಿವಿಜನ್ನುಗಳೇ ಬೇರೆ ನಮ್ಮ ರೆವೆನ್ಯೂ ಪರ್ಪಸನ್ನು ಗಳಿಗಾಗಿ ಮಾಡಿರುವ ಡಿವಿಜನ್ನುಗಳ ಉದ್ದೇಶವೇ ಬೇರೆ. ಎಲೆಕ್ಟ್ರಿಕ್ ಡಿವಿಜನ್ನುಗಳನ್ನು ಮೊದಲೇ ಸರಿಯಾಗಿ ನೋಡಿ ಮಾಡಲಾಗಿದೆ.

ಶ್ರೀಮತಿ ಜಿ.ಸಿ. ಭಾಗೀರಥಮ್ಮ.—ಲೈನುಗಳನ್ನು ಎಳೆಯಲು ಕಂಬದ ಅಭಾವವಿರುವಂತೆ ಸಿಮೆಂಟಿನ ಅಭಾವವೂ ಇರುವುದು ಗೊತ್ತಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸಿಮೆಂಟಿನ ಅಭಾವ ಗೊತ್ತಿದೆ.

Sri N. O. SAMAJI.—(In Marathi)

ಶ್ರೀ ಎಸ್. ನಿಜಲಿಂಗಪ್ಪ.—ಸರ್ವೆ ನಡೆಯುತ್ತಿದೆ ಎಂದು ಅಲ್ಲಿ ಎಲ್ಲ ಕೆಲಸಗಳನ್ನೂ ಕೊಡುವದಕ್ಕೆ ಆಗುವುದಿಲ್ಲ. ಇವನ್ನೆಲ್ಲಾ ವಿಚಾರ ಮಾಡಿ ಪರೀಕ್ಷೆ ಮಾಡಬೇಕಾಗಿದೆ.

Restoration of Bettahalli Tank

*Q.—425. Sri ANDANAIAH (Kunigal).—

Will the Government be pleased to state :—

(*a*) the year in which the waste-weir of Bettahalli Tank in Hutridurga Hobli, Kunigal Taluk, Tumkur District was dismantled by the Engineering Department ;

(*b*) the length of waste-weir dismantled and the reasons for the same ;

(*c*) whether it is a fact that the atchkatdars behind the said tank have submitted a representation to authorities and the Government to get it restored to its original height ;

(*d*) whether it is not a fact that the Executive Engineer, Tumkur Division has directed the Assistant Engineer, Kunigal in writing to get it restored to its original height ;

(*e*) whether it is also a fact that the same Executive Engineer has redirected the Assistant Engineer in writing to get it constructed at the height of 9″ less than the original height and if so, the reasons for the same ;

(*f*) the original height of the waste-weir ;

(*g*) whether it is a fact that the Deputy Minister for Minor Irrigation has directed the Executive Engineer to get it restored to its original height ;

(*h*) if so, the reasons for not constructing the same so far ;

(*i*) whether it has come to their notice that the paddy crops during this year were affected for lack of sufficient water in the tank on account of not reconstructing the same in time ?

A.—Sri ALUR HANUMANTHAPPA (Deputy Minister for Minor Irrigation).—

(*a*) During 1946.
(*b*) About 16'–Due to heavy ploods.
(*c*) Yes.
(*d*) Yes.
(*e*) Yes, To avoid the submersion of private lands temporarily.
(*f*) The original weir was a natural flush escape at RL 50.00.
(*g*) Yes.
(*h*) Reply *vide* (*e*).
(*i*) No.

ಶ್ರೀ ಅಂದಾನಯ್ಯ.—16 ಕೆರೆಗಳ ಕೋಡಿ ಒಡೆದು ಹೋಗಿವೆ ಎಂದು ಇಲ್ಲಿ ಹೇಳಲಾಗಿದೆ. ಕೋಡಿಯನ್ನು ಪುನಃ ಕಟ್ಟುವುದಕ್ಕೆ ಸರಕಾರ ಏನು ಕ್ರಮಕೈಗೊಂಡಿದೆ ?

†ಶ್ರೀ ಆಲೂರು ಹನುಮಂತಪ್ಪ.—ಕೋಡಿಯನ್ನು ಕಿತ್ತು ಹಾಕಿದ ಮೇಲೆ ಅದನ್ನು ರೆಸ್ಟೋರು ಮಾಡುವ ಪ್ರಯತ್ನಮಾಡಬೇಕು ಎಂದು ಮಾಡಿದಾಗ ಅಲ್ಲಿ ಅಕ್ಟಿಸಿಪನ್ನು ಪ್ರಾಬ್ಲಂ ಬಂತು, ಅದೂ ಆಯಿತು.

ಶ್ರೀ ಬಿ. ಚನ್ನಬೈರೇಗೌಡ.—1946ರಲ್ಲೇ ಈ ಕೆರೆಯ ಕೋಡಿಯನ್ನು ಕಿತ್ತುಹಾಕಿರುವುದರಿಂದ ಇಲ್ಲಿಗೆ ಸುಮಾರು 19 ವರ್ಷಗಳಾದವು, ಇಷ್ಟು ಕಾಲವಾದರೂ ಕೂಡ ಪುನಃ ಇದಕ್ಕೆ ಕಟ್ಟೆಯನ್ನು ಕಟ್ಟದೇ ಇರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಕಟ್ಟೆಯನ್ನು ಕಟ್ಟುವುದಕ್ಕೆ ಅಲ್ಲಿನ ಜನರು ಇದಕ್ಕೆ ವಿರೋಧವಾಗಿ ಅಬ್‌ಜಕ್ಷನ್ನುಗಳನ್ನು ಹಾಕಿದುದರಿಂದ ಇನ್ನೂ ಇದನ್ನು ಕಟ್ಟಲಿಕ್ಕೆ ಸಾಧ್ಯವಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಕೊಟ್ಟಿರುವ (ಬಿ) ಭಾಗದ ಉತ್ತರಕ್ಕೂ ಮತ್ತು (ಎಫ್) ಭಾಗದ ಉತ್ತರಕ್ಕೂ ವ್ಯತ್ಯಾಸವಿದೆ, ಇದರಲ್ಲಿ ಯಾವುದು ಸರಿಯಾಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಮೊದಲು ಡಿಸ್‌ಮ್ಯಾಂಟರ್ ಮಾಡಿಯೇ ಅನಂತರ ವೇಸ್ಟು ವೇರನ್ನು ಕಟ್ಟಬೇಕಾಗಿ ಬರುವುದು.

Sri C. J. MUCKANNAPPA.—May I know if there was a natural waste-weir or whether there was a masonry waste-weir which was dismantled.

Sri ALUR HANUMANTHAPPA.—The masonry waste-weir was dismantled in 1958.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಹೇಳಿದಂತೆ ಕೆಲವು ಜನರು ಇಲ್ಲಿ ಕಟ್ಟೆಯನ್ನು ಕಟ್ಟಲು ಒಪ್ಪದೇ ಹೋದುದರಿಂದಾಗಿ ಇಲ್ಲಿ ಕಟ್ಟಲಾಗಲಿಲ್ಲ ಎಂದರು. ಮುಳುಗಡೆಯಾಗುವುದಕ್ಕೆ ಮೊದಲು ಇಲ್ಲಿ ಅಕ್ಟಿಸಿಪನ್ನು ರಿಕಾರ್ಡುಗಳಾಗಿರಲಿಲ್ಲವೇ ? ಹಾಗೆ ಮಾಡಿಪೆ ಇರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇದು 1938ರಿಂದಲೂ ಕಟ್ಟಲು ಆಗಲಿಲ್ಲ. ಅನೇಕ ಕಡೆಗಳಲ್ಲಿ ಸಾಮಾನ್ಯವಾಗಿ ಮುಳುಗಡೆಯಾಗುವ ಜಮೀನುಗಳ ಬಗ್ಗೆ ಮೊದಲು ಒಂದು ನಿರ್ದಿಷ್ಟವಾದ ಪರಿಹಾರವನ್ನು ಕೊಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1938ರಿಂದ 1946ರ ವರೆಗೆ ಎಂದರೆ ಸುಮಾರು 8 ವರ್ಷಗಳ ಕಾಲ ಮುಳುಗಡೆಯಾಗುವ ಜಮೀನಿನವರು ರೆವೆನ್ಯೂ ಇಲಾಖೆಯವರಿಗೆ ಏನಾದರೂ ತಕರಾರುಗಳನ್ನು ಕೊಟ್ಟಿದ್ದರೆ ಅದರ ಮೇಲೆ ಇಲಾಖೆಯವರು ಇಲ್ಲಿಯವರೆಗೂ ತಕ್ಕಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇದರ ವಿವರಗಳ ರಿಕಾರ್ಡುಗಳು ಇಲ್ಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕಚ್ಚೆ ಕಿತ್ತುಹೋಗಿರುವುದರಿಂದ 45 ಜನರ ಜಮೀನಿನಲ್ಲಿ ಬೆಳೆ ನಷ್ಟವಾಗಿರುವುದರಿಂದ ನಷ್ಟ ಭರ್ತಿ ಮಾಡಿಕೊಡಬೇಕೆಂದು ರೈತರು ಸರಕಾರದ ಮೇಲೆ ಡ್ಯಾಮೇಜು ನೋಟೀಸ್ ಏನಾದರೂ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಬೆಳೆ ನಷ್ಟವಾಗಿಲ್ಲ. ಸೀಪೇಜ್ ವಾಟರ್ ಬರುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಉತ್ತರ (ಈ)ನಲ್ಲಿ ನಿಜ, ಖಾಸಗಿ ಜಮೀನುಗಳು ತಾತ್ಕಾಲಿಕವಾಗಿ ಮುಳುಗಡೆಯಾಗದಂತೆ ತಪ್ಪಿಸುವ ನಿಯಮವಾಗಿ ಎಂದು ಉತ್ತರ ಹೇಳಿದೆ. ಎಗ್ಸೆಕ್ಯೂಟಿವ್ ಎಂಜಿನಿಯರಿಗೆ ಹಾಗೆ ತಿಳಿಸುವುದಕ್ಕೆ ಯಾರು ಅಧಿಕಾರ ಕೊಟ್ಟಿದ್ದರು ? ದುಡ್ಡು ಪ್ರಾಮುಖ್ಯವಾದುದು ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಎಗ್ಸಾಮಿನ್ ಮಾಡಿ ಎಂದು ಹೇಳಿದ್ದರು, ಸಂಬಂಧಪಟ್ಟವರು ಇನ್‌ಸ್ಪೆಕ್ಷನ್ ಮಾಡುತ್ತಿದ್ದರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನೇಕ ಅರ್ಜಿಗಳು ಬಂದಿವೆ. ಎರಡು ಮೂರು ಸಲ ಫೋನ್ ಮಾಡಿದ್ದಾರೆ. ಡೆಪ್ಯೂಟಿ ಮಿನಿಸ್ಟರ್ ಅವರು ಬಂದು ನೋಡಿದರೆ ಅದರಿಂದ ಪ್ರಯೋಜನವಾಗುವುದಿಲ್ಲ ಎಂದು ಹೇಳುವುದಕ್ಕೆ ಕಾರಣವೇನು ?

Mr. SPEAKER.—If any irrelevant matter is brought in I will have to disallow it.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಕೆರೆಯ ಕೆಳಗಡೆಗೆ ಇರುವ ತೆಂಗಿನ ತೋಟಗಳ ಮಾಲೀಕರಾದ ದೊಡ್ಡ ಬಂಡವಾಳಗಾರರಿಗೆ ಉಪಕಾರ ಮಾಡುವುದಕ್ಕೋಸ್ಕರ ಕಚ್ಚೆ ಕಿತ್ತು ಹಾಕಿ ದೊಡ್ಡದಾಗಿ ಮಾಡುತ್ತಾ ಇದ್ದೀರಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ.

Starting of Teachers' Training Centre

*Q.—472. Sri S. RAJAGOPAL (K.G.F.).—

Will the Government be pleased to state :—

(*a*) whether they have received any representations to start a Teacher's Training Centre at Kolar Gold Fields ;

(*b*) if so, the action taken thereon ?

A.—Sri S. R. KANTHI (Minister for Education).—

(*a*) Yes ; a personal representation was made by the Managing Committee of the Mysore Mines.

(*b*) No action has been taken as there is no provision during the current year.

Sri S. RAJAGOPAL.—May I know the number of trained and untrained teachers in K.G.F. in the Primary and Middle Schools ?

† Sri S. R. KANTHI.—I have no information with me.

Sri S. RAJAGOPAL.—Whether the Government of Mysore is aware that the K.G.F. Teachers Association is thinking of starting a Training Institute in K.G.F ?